ಮೂಡಿಸಿದವು. ನನ್ನ ಬಾಲ್ಯದ ಅಧೋಲೋಕದ ಮೃತ್ಯು ಬಿಂಬಗಳು ಕಲಕುವಂತಿದ್ದ ಬಾವಿಯಿಂದ ಸಿಹಿಯಾದ ಜೀವಜಲವನ್ನು ಸೇದಿಕೊಳ್ಳಲು ಈ ಓದಿನ ಏಕಾಂತ ಮತ್ತು ಬೀದಿಯ ಹೊಯ್ದಾಟಗಳು ಹಗ್ಗ ಮತ್ತು ಗಡಗಡೆಯಾದವು.

ಇವೆಲ್ಲ ಧಾರವಾಡದ ಓದಿನ ಕಾಲದ ವೃತ್ತಾಂತಗಳು; ನಂತರದ ದಿನಗಳಲ್ಲಿ ಪರೀಕ್ಷೆಯ ಕೆಲಸಗಳಿಗಾಗಿ ಧಾರವಾಡದಲ್ಲಿ ಪ್ರತಿ ವರ್ಷ ಎರಡು ಮೂರು ವಾರ ಉಳಿಯಬೇಕಿತ್ತು. ಮನೋಹರ ಗ್ರಂಥಮಾಲೆಯ ಅಟ್ಟದಲ್ಲಿ ಕೀರ್ತಿನಾಥ ಕುರ್ತಕೋಟಿ, ಗಿರೀಶ ಕಾರ್ನಾಡರು ಸಂಪರ್ಕಕ್ಕೆ ಬಂದರು. ಗ್ರಂಥಮಾಲೆಗೆ ಕುರ್ತಕೋಟಿಯವರು ನನ್ನಿಂದ ಕಾದಂಬರಿ(ಕೇತಕಿಯ ಬನ)ಯನ್ನು ಬರೆಯಿಸಿದರು; ಕುರ್ತಕೋಟಿ ಮತ್ತು ಕಾರ್ನಾಡರ ನಡುವಿನ ಚರ್ಚೆಯ ಫಲವಾಗಿ ನನ್ನ ಕತೆ 'ಇಳೆ ಎಂಬ ಕನಸು' ಕತೆ ಹುಟ್ಟಲು ಕಾರಣವಾಯಿತು. ಸಂಜೆ ಹೊತ್ತು ಜಿ.ಎಸ್. ಆಮೂರ ಮತ್ತು ಗಿರಡ್ಡಿ ಗೋವಿಂದರಾಜರ ಭೇಟಿ ಇದ್ದೇ ಇರುತ್ತಿತ್ತು.

◆ ನಿಮ್ಮದೇ ಕತೆಗಳು ಹುಟ್ಟಿಕೊಂಡದ್ದು ಯಾವಾಗ? ಹೇಗೆ?

ನನ್ನ ಮೊದಲ ಕತೆ 'ಆವರಣ' ನಾನು ಶಿರಸಿಯ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಯಾಗಿದ್ದಾಗ 'ತುಷಾರ' ಮಾಸ ಪತ್ರಿಕೆಯಲ್ಲಿ ಪ್ರಕಟವಾಯಿತು. ಪತ್ರಿಕೆಯ ಅಂದಿನ ಸಂಪಾದಕರಾಗಿದ್ದ ಈಶ್ವರಯ್ಯನವರ ಮುದ್ದಾದ ಹಸ್ತಾಕ್ಷರಗಳಲ್ಲಿ 'ಪ್ರಿಯ ಬಂಧು' ಎಂದು ಆರಂಭವಾಗುತ್ತಿದ್ದ ಸ್ವೀಕೃತ ಪತ್ರದ ಒಕ್ಕಣಿಕೆ ಓದಿ ರೋಮಾಂಚನವಾಗಿತ್ತು. ಖುಶಿ ಚಿಮ್ಮಿಸಿದ ಆ ಪತ್ರವನ್ನು ನಾನು ಬಾಡಿಗೆಗಿದ್ದ ಭಂಡಿಮನೆ ಚಾಳದ ಗೆಳೆಯರಿಗೆ ತೋರಿಸಿ ಪಟ್ಟ ಸಂತೋಷ ಇಂದಿಗೂ ನೆನಪಿದೆ. ಆಗ ನಾನು ಇಡೀ ಕರ್ನಾಟಕಕ್ಕೆ ಪರಿಚಯವಾದ ಕತೆಗಾರನಾದೆ ಎಂಬ ಭ್ರಮೆಯಲ್ಲಿದ್ದೆ. ಉರಿಯುತ್ತಿದ್ದ ಜೀವದೊಳಗಿನ ಬೆಂಕಿ ಜಗತ್ತನ್ನು ಅರಿಯುವ ಬೆಳಕಾಗಿ ರೂಪಾಂತರವಾಗುತ್ತಿದ್ದ ಸೋಜಿಗದಲ್ಲೆ ನನ್ನ ಸೃಜನಶೀಲ ಝರಿಯ ಹುಟ್ಟಿರಬೇಕು. ನಾನು ಕಥಾಭಾಷೆಯನ್ನು ಕಲಿತದ್ದು ಸಾಹಿತ್ಯದ ಸಿದ್ಧಾಂತ, ಶಾಸ್ತ್ರ, ವ್ಯಾಕರಣ, ಶಬ್ದಕೋಶದ ಅಧ್ಯಯನದಿಂದಲ್ಲ; ನೇರವಾಗಿ ಕೃತಿಯ ಓದಿನಿಂದ; ಒಂದು ರೀತಿಯಲ್ಲಿ ಸಹಜ ಸನ್ನಿವೇಶದಲ್ಲಿ ಮಾತೃಭಾಷೆಯನ್ನು ಕಲಿತಂತೆ. ಅನಂತಮೂರ್ತಿಯವರ ಕಥನ ನನ್ನ ಪರಿಸರದ ಒಳ ಭಿತ್ತಿಯಾಗಿತ್ತು. ಅವರ 'ಪ್ರಶ್ನೆ'ಯ ಕತೆಗಳ ಪಾತ್ರಗಳು ನನ್ನ ನಿತ್ಯ ಜೀವನದ ವ್ಯಕ್ತಿಗಳಾಗಿದ್ದರು; ವಸ್ತು ವಾಸ್ತವ ಅನುಭವವಾಗಿತ್ತು; ಲೈಂಗಿಕ ಸೌಂದರ್ಯ ಮತ್ತು ಸಾಂಪ್ರದಾಯಕ ಕ್ರೌರ್ಯ, ಪ್ರಕೃತಿ ಮತ್ತು ಸಂಸ್ಕೃತಿಯ ಮುಖಾಮುಖಿ, ಪಾಳುಬಿದ್ದ ಅವಶೇಷದಂತಿರುವ ಹಳೆಯ ಮನೆಗಳು, ಸಂಪ್ರದಾಯಸ್ಥ ಅಸ್ವಸ್ಥ ಮನುಷ್ಯರು, ಸಾಮಾಜಿಕ ಕಟ್ಟುಪಾಡುಗಳ ಹೊರಗೆ ಜೀವ ಕಾಮದಿಂದ ಉಕ್ಕುವ ಮನುಷ್ಯರು, ತನ್ನನ್ನು ತಾನು ಶುದ್ಧೀಕರಿಸಿಕೊಂಡು ಅತೀಂದ್ರಿಯ ಎತ್ತರಕ್ಕೆ ಚಿಮ್ಮಲು ಯತ್ನಿಸುವ ಬಂಡಾಯಗಾರರು ನನ್ನ ಮೊದಲ ಕಥಾಸಂಕಲನ 'ಅಧೋಮುಖಿ'ವನ್ನು ಆವರಿಸಿದವು. ಪೂರ್ಣಚಂದ್ರ ತೇಜಸ್ವಿಯವರಿಂದ ಅಮಾನುಷ ವಸ್ತುನಿಷ್ಠತೆ ಅಂದರೆ, ಮನುಷ್ಯ ಜಗತ್ತಿನ ವಿದ್ಯಮಾನಗಳ ಬಗ್ಗೆ ಪ್ರಕೃತಿಗಿರುವ ಅಗಾಧ ನಿರ್ಲಕ್ಷ್ಯ ಮತ್ತು ಆಧುನಿಕ ನಾಗರಿಕತೆಯ ಅಸಂಗತತೆಯಲ್ಲಿ ಅಸ್ತಂಗತರಾಗಿರುವ ಇತಿಹಾಸದಾಚೆಯ ಅತಂತ್ರ ಮನುಷ್ಯ ಲೋಕದ ದರ್ಶನವಾಯಿತು. ವ್ಯಕ್ತಿ ಕೇಂದ್ರಿತ ಬರವಣಿಗೆಯಿಂದ ಸಮಾಜದ ಬಹಿರಂಗ ಸತ್ಯದ ಹುಡುಕಾಟಕ್ಕೆ ತೊಡಗಿದ ತೇಜಸ್ವಿಗೆ ನನ್ನ ಕಥನ ಋಣಿಯಾಗಿದೆ. ಕಥನದ ಪಂಚೇಂದ್ರಿಯಗಳಲ್ಲಿ ಜೀವ ಜಗತ್ತನ್ನು ಅಚ್ಚು ಹಾಕುವ ಕಲೆಯನ್ನು ಯಶವಂತ ಚಿತ್ತಾಲರಿಂದ ಕಲಿತೆ. ಹೀಗೆ ಅಚ್ಚಾದ ಚಿತ್ರಕೂಟಗಳು ಮನುಷ್ಯನ ಅನಂತ ವಿಷಾದವನ್ನೊ, ನಿರಪರಾಧಿಯ ಕಲಾತೀತ ಯಾತನೆಯನ್ನೊ, ಮುಗ್ಧತೆಯ ಪಾವಿತ್ರ್ಯ ನಾಶವನ್ನೊ ನಿರೂಪಿಸುವ ಭಾವ ಶಿಲ್ಪಗಳಾಗುವ ಪರಿ